ದಿನಾಂಕಃ 03-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

2. ಈಗ್ಗೆ 3 ವರ್ಷಗಳ ಹಿಂದೆ ನಾನು ಹೊಲದಲ್ಲಿ ನಡೆದುಕೊಂಡು ಹೋಗುವಾಗ ಜಾರಿ ಬಿದ್ದು ಪೆಟ್ಟು ಮಾಡಿಕೊಂಡಿದ್ದೆನು. ಆದರೆ ಆರೋಪಿಯಿಂದ ನನಗೆ ಯಾವುದೇ ತೊಂದರೆಯಾಗಿಲ್ಲ. ಆ ಬಗ್ಗೆ ಫ್ರಾಸಾ.1 ರವರು ಆರೋಪಿಯ ವಿರುದ್ಧ ಪೊಲೀಸರಿಗೆ ಯಾವುದೇ ದೂರನ್ನು ನೀಡಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

3. ದಿಃ 08-01-2023 ರಂದು ಎಮ್ಮೆ ಮೇಯಿಸುವ ಫ್ರಾಸಾ.4 ಚಂದ್ರಪ್ಪರವರ ಸರದಿ ಇದ್ದು ಅವರ ಪರವಾಗಿ ನಾನು ಎಮ್ಮೆ ಮೇಯಿಸಲು ಸಿದ್ದರ ಓಣಿ ಹತ್ತಿರ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನಗೆ ಬಾಯಾರಿಕೆ ಆಗಿದ್ದರಿಂದ ಎಮ್ಮೆಗಳನ್ನು ಬಿಟ್ಟು ಮಧ್ಯಾಹ್ನ 12 ಗಂಟೆ ಸುಮಾರಿಗೆ ಮಿಟಲಿ ಮರದಡಿಯಲ್ಲಿ ಕುಳಿತು ನೀರು ಕುಡಿಯುತ್ತಿದ್ದಾಗ 1 ನೇ ಆರೋಪಿಯಾದ ಅರುಣಕುಮಾರ ಅಲ್ಲಿಗೆ ಬಂದು ನನ್ನನ್ನು ಕುರಿತು, ನನ್ನ ಜಮೀನಿನಲ್ಲಿರುವ ಜೋಳದ ಗುಡ್ಡೆಗೆ ಎಮ್ಮೆಗಳನ್ನು

ಬಿಟ್ಟಿದ್ದೀಯಾ ಎಂದು ಬೈದಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾನು ಆತನನ್ನು ಕುರಿತು, ಇಲ್ಲಪ್ಪ, ನಿನ್ನ ಜೋಳದ ಗುಡ್ಡೆಗೆ ಎಮ್ಮೆಗಳನ್ನು ಬಿಟಿಲ್ಲ ಎಂದು ಹೇಳಿದೆನು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಒಂದು ದೊಣ್ಣೆಯನ್ನು ತೆಗೆದುಕೊಂಡು ನನ್ನ ಎಡಗಾಲು, ಎಡಗೈ ಮತ್ತು ಸೊಂಟಕ್ಕೆ ಬಲವಾಗಿ ಹೊಡೆದು ಅವಾಚ್ಯ ಶಬ್ಧಗಳಿಂದ ಬೈದನು ಎಂದರೆ ಸರಿಯಲ್ಲ. ಆಗ ನಾನು, ಏಕಪ್ಪಾ ನನಗೆ ಈ ರೀತಿ ಹೊಡೆಯುತ್ತೀರಾ ಎಂದು ಕೇಳಿದಾಗ, ಹೊಲೆಯ ಮಾದಿಗ ಸೂಳೆ ಮಗನೇ, ನಿನ್ನ ತಾಯಿನಾಡ ನಿನಗೆ ಜ್ಞಾನ ಇಲ್ಲವೇನೋ, ನಿನ್ನನ್ನು ಕೊಲೆ ಮಾಡುತ್ತೇನೆ ಮತ್ತು ನಿನ್ನ ಕುಟುಂಬದವರನ್ನು ಯಾರನ್ನು ಕೂಡ ಉಳಿಸುವುದಿಲ್ಲ ಎಂದು ಹೇಳಿ ದೊಣ್ಣೆಯನ್ನು ಅಲ್ಲೇ ಮರದಡಿ ಬಿಸಾಡಿರುತ್ತಾನೆ ಎಂದರೆ ಸರಿಯಲ್ಲ.

4. ನಂತರ ಪ್ರಾಸಾ.1 ರವರು ಜಮೀನಿನಲ್ಲಿ ಕೆಲಸವನ್ನು ಮುಗಿಸಿಕೊಂಡು ಸಂಜೆ 6 ಗಂಟೆಗೆ ನಮ್ಮ ಬೀದಿಯ ಹತ್ತಿರ ಬರುವಾಗ ನಮ್ಮ ಗ್ರಾಮದ ವಾಸಿಯಾದ ಚಾಸಾ.7 ರೇಖಾರವರು ಆತನಿಗೆ ನಾನು ಹನುಮಂತಪ್ಪರವರ ಜಮೀನಿನಲ್ಲಿರುವ ಮರದಡಿಯಲ್ಲಿ ಬಿದ್ದಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಆಗ ನನ್ನ ಮಗ ಪ್ರಾಸಾ.1 ಮತ್ತು ಮೊಮ್ಮಗ ಚಾಸಾ.8 ರವರು ಬೈಕಿನಲ್ಲಿ ಬಂದು ನನ್ನನ್ನು ಕುರಿತು, ಯಾಕೆ ಹೀಗೆ ಮಲಗಿದ್ದೀಯಾ, ಏಕೆ ನಿನ್ನ ಬಟ್ಟೆಯೆಲ್ಲಾ ಈ ರೀತಿ ಹರಿದಿದೆ ಎಂದು ಕೇಳಿದರು ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ನಡೆದ ವಿಚಾರವನ್ನು ತಿಳಿಸಿದೆನು ಎಂದರೆ ಸರಿಯಲ್ಲ. ನಂತರ ಅವರು ನನ್ನನು ಬೈಕಿನಲ್ಲಿ ಕೂರಿಸಿಕೊಂಡು ನಮ್ಮ ಮನೆಗೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ.

5. ನಂತರ ಮಾರನೆ ದಿನ ಬೆಳಿಗ್ಗೆ ನನಗೆ ತುಂಬಾ ನೋವಾಗುತ್ತಿದ್ದ ಬಗ್ಗೆ ಫ್ರಾಸಾ.1 ಮತ್ತು ಚಾಸಾ.8 ರವರಿಗೆ ತಿಳಿಸಿದ್ದು ಅವರು ನನ್ನನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿ ಚಿಕಿತ್ಸೆ ಕೊಡಿಸಿದರು ಎಂದರೆ ಸರಿಯಲ್ಲ.

6. ನಂತರ ದಿಃ 13-01-2023 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.11 ಎಂದು ಗುರುತಿಸಲಾಯಿತು.

7. ಆರೋಪಿ ನಿಮ್ಮ ಮೇಲೆ ಹಲ್ಲೆ ಮಾಡಿ ನಿಮ್ಮ ಜಾತಿಯನ್ನು ನಿಂದಿಸಿದ್ದರೂ ಸಹ ನೀವು ಈಗ ಆತನೊಂದಿಗೆ ರಾಜಿ ಮಾಡಿಕೊಂಡು ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿಯ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ